ಮಾನವತೆಯನ್ನು ಆವರಿಸಿರುವ
ಒಂದು ಮಹತ್ತಮ ಪ್ರಶ್ನೆಯನ್ನು
ಲೇಖಕರಿಲ್ಲಿ ಕೇಳುತ್ತಾರೆ

ಯಾಕೆ ಈ ದೇವರು?

ಕೃಷ್ಣ ಕೊಲ್ಹಾರ ಕುಲಕರ್ಣಿ

ಅಥಾತೋ ಬ್ರಹ್ಮ ಜಿಜ್ಞಾಸಾ' ಎಂದು ಹಿರಿಯರು ವೇದಾಂತವನ್ನು ಪ್ರಾರಂಭಿಸುತ್ತಾರೆ. ಈ ಬ್ರಹ್ಮ ಎಂದರೆ ದೂರು, ಎಲ್ಲಿರುತ್ತಾನೆ, ಹೇಗಿದ್ದಾನೆ ಎಂದೆಲ್ಲ ಚಿಂತಿಸುತ್ತಾರೆ. ಅನಾದಿ ಕಾಲ ದಿಂದಲೂ ಈ ವಿಷಯವನ್ನು ಚರ್ಚಿಸುತ್ತಲೇ ಬಂದಿದ್ದಾರೆ. ಹಾಗೆಯೇ ನಮ್ಮ ಜೀವನದೊಂದಿಗೆ ಈತನನ್ನು ಗಂಟು ಹಾಕಿದ್ದಾರೆ. ಈತ ಅರ್ಥಾತ್ ಈ ಬ್ರಹ್ಮ ಅಥವಾ ದೇವರು. ಇಲ್ಲವೆ ರಾಮ ಎನ್ನಿ ರಹೀಮ ಎನ್ನಿ, ನಮ್ಮ ಜೀವನದಲ್ಲಿ ಹುಟ್ಟಿನಿಂದಲೇ ಬೆರತುಬರುತ್ತಾನೆ. ತಾಯಿಯ ಹೊಟ್ಟೆ ಯಲ್ಲಿ ನಾವು ಇನ್ನೂ ಮೂಡುತ್ತಿರುವಾಗಲೇ ಈತನ ಅವಾಂತರ ಪ್ರಾರಂಭವಾಗುತ್ತದೆ. ಹುಟ್ಟಿದ ಮೇಲಂತೂ, ಸುಮಿ ಬರೆಯುವ ನಮ್ಮಗಳ ಹಣೆಯ ಬರಹದಿಂದ ಪ್ರಾರಂಭವಾದದ್ದು ಕೊನೆಗೆ ರಾಮ ರಾಮಾ ಎಂಬ ಕೊನೆಯ ಉಸಿರು ಎಳೆಯುವವರೆಗೂ ಈ ಕಾಣದ ಬೇವಾರ್ಸಿ ರಾಮ ನಮ್ಮ ಬೆನ್ನು ಬಿಡುವುದಿಲ್ಲ. ಇಲ್ಲೆಲ್ಲ ಬರುವ ಒಂದು ಪ್ರಶ್ನೆ ಎಂದರೆ ಮೂಲದಲ್ಲಿ ಈ ಬ್ರಹ್ಮ ನನ್ನು ಅಥವಾ ದೇವರನ್ನು ಹುಟ್ಟಿಸಿದವರು ಯಾರು? ಈತ ಎಲ್ಲಿ ಹುಟ್ಟಿದ? ಪ್ರತಿಯೊಂದ ಕ್ಕೂ ಸೃಷ್ಟಿಕರ್ತ ಎಂಬ ಸರ್ವಲಿಂಗೀ ವಸ್ತುವಿರುವಾಗ ಈ ಸೃಷ್ಟಿಕರ್ತ ಎಂಬ ವಸ್ತುವಿಗೂ ಒಂದು ಹುಟ್ಟು ಇರಬೇಕಲ್ಲ? ಈ ದೇವರೆಂಬ ಸೃಷ್ಟಿಕರ್ತ ವಸ್ತುವನ್ನು ಮನುಷ್ಯನೇ ಹುಟ್ಟಿ

ಅಥವ ಪ್ರಾರಂಭಿಸಿದ ಎಂಬುದು ವಿಚಿತ್ರ ವಾಗುತ್ತದೆ. ನಮ್ಮ ಹಿಂದಿನ, ಬಹಳ ಹಿಂದಿನ ಬಹುಶಃ ನಮಗೆಲ್ಲ ಗೊತ್ತಿರಲಾರದಷ್ಟು ಹಿಂದಿನ ಮಹಾಮಾಧವನೊಬ್ಬ ಇವನ್ನು ನಿರ್ಮಿಸಿರ ಬೇಕು. ಆತನೇ ನಮ್ಮೆಲ್ಲರ ಮೂಲಪುರುಷನೂ ಆಗಿರಬೇಕು. ಮಾತು ಬರದ ಆ ಮುದಿಯ ಒಂದು ದಿನ ಬೆಳಿಗ್ಗೆ ಎದ್ದು ಕಣ್ಣು ಬಿಳುಕಿಸಿದಾಗ ಎದುರಿಗೆ ಕಂಡ - ಗಾಳಿ-ಬೆಳಕು-ಮಳೆಗಳನ್ನು ಕಂಡು ಗಾಬರಿಯಾದ. ಭಯ-ದಿಂದ ತತ್ತರಿಸಿದ. ಯೋಚಿಸಲು ವಿಚಾರಿಸಲು ಆತ ಶಕ್ತನಾಗಿರಲಿಲ್ಲ. ಅಂತೆಯೇ ಮತ್ತೆಷ್ಟು ಆವುಗಳಿಗೆ ಮಣಿದೋ, ಇಲ್ಲವೆ ಕಣ್ಣು ಮುಚ್ಚಿಕೊಂಡೋ, ಅಥವಾ ಕೈ ಎತ್ತಿದೋ ಕರೆವ ಬಂದ. ಆದುವೆ ನಮಸ್ಕಾರವಾಗಿರಬೇಕು. ಆತನ ಆ ಮುದುರಿಕೊಂಡ ಕೈತಿ 'ಭಕ್ತಿ' ಎನಿಸಿತು. ಆದು ಅಯ, ಅವನಿಗೆ ಅನಿವಾರ್ಯವಾಗಿತ್ತೆಂಬ ಗೊತ್ತಿರದ ಅಥವಾ ಭಯದಿಂದ ಒಪ್ಪಿಕೊಂಡ ಆ ಘಸ್ತು ಪ್ರತಿ ಹಂತದಲ್ಲಿಯೂ ನಮಗಿಂತ ಶ್ರೇಷ್ಠತೆಯನ್ನು ಪಡೆಯಿತು. ಹೀಗೆ ಶ್ರೇಷ್ಠತೆಯನ್ನು ಪಡೆದ ವಸ್ತುವೇ ದೇವರಾಗಿರಬೇಕು. ಇಂದು ಅವರ ತೂಕ, ಕಲ್ಪನೆ, ಆಳ, ಮಹಿಮೆಗಳು ನಮ್ಮ ಕಲ್ಪನೆಗೂ ಎಟುಕಲಾರದಷ್ಟು ಬೆಳೆದುಬಿಟ್ಟಿವೆ. ಹೇಗೆಂದರೆ,

ತಿಣುಕಿದನು ತಲೆರಾಯ ದೇವಾ।
ಯಣದ ಜನಗಳ ಭಾರದಲಿ ತಿಂ।
ತಿಣಿಯ ದೇವರ ಚರಿತೆಯಲಿ
ಕಾಲಿಡಲು ತೆರಪಿಲ್ಲ

ಎನ್ನುವಂತಾಗಿದೆ. ಆದ್ದರಿಂದ ಇಂದು ನಿಜವಾಗಿಯೂ ಅಂಥ ದೇವರೆಂಬ ವಸ್ತುವಿನ ಅವಶ್ಯಕತೆ ಇದೆಯೆ? ಎಂದು ವಿಚಾರಿಸಬೇಕಾಗಿದೆ. ಯಾಕೆಂದರೆ ಹಿಂದೆ ಎಂದೋ ಒಮ್ಮೆ ಭಯದಿಂದ ಮುದುರಿಕೊಂಡು ಆರ್ಥವಾಗದ

ಯಾಕೆ ಈ ದೇವರು ?

ದನ್ನು ಮರೆಯುವಂತಿಲ್ಲ. ಆದರೆ ಅದನ್ನೇ ಮುಂದಿಟ್ಟರೂ ಅನುಸರಿಸಿದರೆ. ಆಷ್ಟೇ ಅಲ್ಲ ಆ ಮೂಲ ಕಲ್ಪನೆಗೆ ಇನ್ನಷ್ಟು ನೀರನ್ನೆರೆದು ಪೋಷಿಸಿದರೆ. ಆದರಿಂದ ಕಾಲ ಕಾಲಕ್ಕೆ ಮನುಷ್ಯನ ಬುದ್ಧಿ ವಿಚಾರಗಳು ಬೆಲೆತಂತೆ ದೇವರೆಂಬ ಕಲ್ಪನೆಯು ಸಸಿ ಬೆಳೆದು ದೊಡ್ಡದಾಯಿತು. ಅದು ಈಗ ಪ್ರೌಢರಾಗಿದೆ. ನಮ್ಮಗಳ ಸಂಸಾರ ಬೆಳೆದಂತೆ ಆತನ ಸಂಸಾರವೂ ಬೆಳೆಯಿತು. ನಮಗಿದ್ದ ಲೋಕದಂತೆ ಆತನಿಗೂ ಒಂದು ಲೋಕವ ಕಲ್ಪನೆಯಾಯಿತು. ನಾವು ಉಡುವ ಬಟ್ಟೆಗಳು ಆವನಿಗೂ ಬಂದುವು. ಹೀಗೆ ಕಲ್ಪಿಸುವಾಗಲೆಲ್ಲ ನಾವು ಆವನನ್ನು ತೂಕದಲ್ಲಿ, ಅಯಿಷ್ಮದಲ್ಲಿ ನಮಗಿಂತ ಒಂದಿಷ್ಟು ಹೆಚ್ಚಾಗಿಯೇ ಕಲ್ಪಿಸುತ್ತ ಹೋದೆವು. ಯಾಕೆಂದರೆ ನಮ್ಮಲ್ಲಿದ್ದ ಆ ಕುರಿತಾದ ಭಯ, ಅಜ್ಞಾನಗಳು ಇದಕ್ಕೆ ಕಾರಣವಿದ್ದಿರಬೇಕು. ಹೀಗಾಗಿ ಪ್ರಕೃತಿವೈಚಿತ್ರ್ಯಕ್ಕೆ ಕೈ ಮುಗಿಯುವ ಪರಿಸ್ಥಿತಿ ಇಂದು ಇಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಪ್ರತಿಯೊಂದನ್ನೂ ಚಿಕಿತ್ಸಕ ಬುದ್ಧಿಯಿಂದ ನೋಡುತ್ತಿರುವ ಈ ದಿನಗಳಲ್ಲಿ ದೇವರನ್ನು ಕೂಡ ವೈಜ್ಞಾನಿಕವಾಗಿ ಸಿದ್ಧಮಾಡಿ ತೋರಿಸುವುದು ಸಾಧ್ಯವಿದೆಯೆ ಎಂದು ಕೇಳುವ ದಿನಗಳು ಬಂದಿವೆ. ಹೀಗೆಂದು ಹೇಳಿದಾಕ್ಷಣ 'ಇವನಲ್ಲೊ ನಾಸ್ತಿಕ' ಅಥವಾ 'ಇವ ನಿರೀಶ್ವರವಾದ' ಎಂದು ಹಣೆಪಟ್ಟಿ ಬಡಿಯಲಾಗುತ್ತದೆ. ಆದರೆ ಈ ಪ್ರಶ್ನೆ ಈಶ್ವರ ನಿರೀಶ್ವರ ಎರಡೂ ವಾದಗಳಿಗೆ ಸಂಬಂಧಿಸಿದ್ದಲ್ಲ. ವಾಸ್ತವದಲ್ಲಿ ದೇವರನ್ನು ವೈಜ್ಞಾನಿಕವಾಗಿ ಸಿದ್ಧ ಮಾಡಿತೋರಿಸುವುದಕ್ಕಿಂತ ಈ 'ದೇವರು' ಎಂಬ ವಸ್ತುವಿನ ಅವಶ್ಯಕತೆ ಇದೆಯೆ ಎಂದು ವಿಚಾರಿಸಬೇಕು. ಜೀವನದಲ್ಲಿ ದೇವರ ಅವಶ್ಯಕತೆ ಇದೆಯೆಂದು ಕಂಡುಬಂದರೆ ಆಮೇಲೆ ಅವನನ್ನು ಸಿದ್ಧ

ಮಾಡಿ ತೋರಿಸುವ ಪ್ರಯತ್ನ ಮಾಡಬೇಕು.

ಈ ದೇವರು ಎಂಬ ವಸ್ತು ಏತಕ್ಕೆ ಬೇಕು? ನಿತ್ಯ ಜೀವನದಲ್ಲಿ ಇವರ ಅವಶ್ಯಕತೆ ಇದೆಯೆ? ಗಾಳಿ, ಬೆಳಕು, ಅನ್ನ, ನಿದ್ರೆ ಹಾಗು ಮೈಥುನಗಳಂತೆ ಜೀವಕ್ಕೆ ಈ ದೇವರ ಅವಶ್ಯಕತೆ ಇದೆಯೆ? ಇದ್ದರೆ, ಜೀವನದ ಯಾವ ಹಂತದಲ್ಲಿ ಈತನ ಅವಶ್ಯಕತೆ ಉಟಾಗುತ್ತದೆ? ಹೀಗೆಲ್ಲ ವಿಚಾರಿಸುವಾಗ ಸಾಮಾನ್ಯವಾಗಿ ಯಾರಿಗೂ ಯಾವ ಹಂತದಲ್ಲಿಯೂ ಈ ದೇವರ ಅವಶ್ಯಕತೆ ಕಂಡು ಬರುವುದಿಲ್ಲ. ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ ಯಾವ ವ್ಯಕ್ತಿ ತಿಂಗಳಿನ ಮೂವತ್ತೊಂದು ದಿನ ದುಡಿದ ಮೇಲೆ ಮೂವತ್ತೊಂದನೆಯ ದಿನ ಪಡೆದ ಸಂಬಳವನ್ನು ತಾನು, ತನ್ನ ಜೀವನಕ್ಕಾಗಿ ಮುಂದಿನ ಮೂವತ್ತು ದಿನಗಳ ಊಟ, ಬಟ್ಟೆಯ ಮತ್ತು ಇನ್ನಿತರ ಬದುಕಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಉಪಯೋಗಿಸುವಿನ ಅವಶ್ಯಕತೆ ಬಿದ್ದಿತು. ಆಗ ಕಾಣದ ಈ ದೇವರೆಂಬ ವಸ್ತುವನ್ನು ಹುಟ್ಟಿಸಿ ಅವರ ಮೇಲೆ ತಾನು ಹೊರಲಾರನೆಂದೆನಿಸಿದ ಎಲ್ಲ ಭಾರವನ್ನು ಹಾಕಿ ಎಲ್ಲ ಆವರ/ಅವನ/ಅವಳ ಲೀಲೆ ಎಂದು ಬಿಟ್ಟರು. ಮತ್ತು ಈ ಹಂತದಲ್ಲಿ ಆತನ ಕೃಪೆಯ ಅವಶ್ಯಕತೆ ಉಂಟಾಯಿತು. ಅಂತೆಯೇ ಆತನ ಕೃಪೆಗೆ ಪಾತ್ರರಾದರೆ ಈ ಸಂಕಟಗಳಿಂದ ಪಾರಾಗುತ್ತೇವೆಂಬ ಭ್ರಮೆಯೂ ಈ ದೇವರ ಸೃಷ್ಟಿಗೆ ಮತ್ತು ಅವಶ್ಯಕತೆಗೆ ಕಾರಣವಾಯಿತು.

ಹಿಂದಿನ ಕಾಲದಲ್ಲಿಯ ಅಲ್ಪ ಜನಸಂಖ್ಯೆ, ಕಡಿಮೆ ದುಡಿತ, ಪೇರಳವಾಗಿ ದೊರೆಯುವ ಅನ್ನ ಇವುಗಳಿಂದಾಗಿ ಉಳಿದ ವೇಳೆಯನ್ನು ಹೇಗೆ ಕಳೆಯಬೇಕು? ಎಂಬ ಪ್ರಶ್ನೆ ಬಾರದಿರಬೇಕು. ಆಗ ಆವರೆಲ್ಲ ಈ ಗೊತ್ತಿರದ ದೇವರನ್ನು ಹುಡುಕುವುದಕ್ಕೆ ಪ್ರಾರಂಭಿಸಿರಬೇಕು,

ಯಾಕೆ ಈ ದೇವರು ?

ಗಿಸುತ್ತಾನೆಯೊ ಆತನಿಗೆ ಈ ದೇವರ ಅವಶ್ಯಕತೆ ಇದೆಯೆ? ಅಥವಾ ಯಾವ ವ್ಯಕ್ತಿ ವರುಷ ವಿಡೀ ದುಡಿದು, ತನ್ನ ಭೂಮಿಯನ್ನು ಹಸನು ಮಾಡಿ ಉತ್ತಿ, ಬಿತ್ತಿ, ಬೆಳೆದು ಬಂದದ್ದರಲ್ಲಿ ಬರುವ ವರುಷದ ಬದುಕಿನ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾನೆಯೊ ಆತನಿಗೆ ಈ ದೇವರ ಅವಶ್ಯಕತೆ ಉಟಾಗುತ್ತದೆಯೆ? ಇಲ್ಲ, ಈ ಇಬ್ಬರಿಗೂ ಸರಿಯಾಗಿ ಊಟ ಬಟ್ಟೆ ಇನ್ನಿತರ ಕಾಲಕ್ಕನುಸಾರವಾಗಿ ಆವಶ್ಯಕತೆಗಳು ದೊರಕುವವರೆಗೆ ದೇವರ ಅವಶ್ಯಕತೆಯೇ ಬೇಳುವುದಿಲ್ಲ. ಹಾಗಾದರೆ ಈ ದೇವರ ಅವಶ್ಯಕತೆ ಯಾವಾಗ ಉಂಟಾಗುತ್ತದೆ? ಗೊತ್ತಿರದ ಈ ಸೃಷ್ಟಿ ವೈಚಿತ್ರ್ಯಕ್ಕೆ ಮಣಿದು ತಾನು ಆಘಾತಕ್ಕೊಳಗಾದಾಗ, ಇಲ್ಲವೆ ತಾನು ಸಂಕಟದಲ್ಲಿ ಸಿಲುಕಿ ಬಿದ್ದಾಗ ಆದರ ಭಾರವನ್ನು ಹೊರಲು ತನ್ನಿಂದ ಸಾಧ್ಯವೇ ಇಲ್ಲ ಎಂದು ಆನಿಸಿದಾಗ ಒಂದು ಹೊಸ ಬಂದ ಸಂಕಟಗಳನ್ನು ಪರಿಹರಿಸಲು ದೇವರು ಎಂಬ ಕಾಲ್ಪನಿಕ ವಸ್ತು ಸಹಾಯವಾಗಿದ್ದರೆ ಆದರಲ್ಲಿ ತಪ್ಪೇನಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಜೀವ ಕಷ್ಟಗಳಿಂದ ದೂರವಾಗಿರಲು ಬಯಸುತ್ತದೆ. ಯಾರೂ ಬೇಕಾಗಿ ಕಷ್ಟಗಳಿಗೆ ಆಮಂತ್ರಣ ಕೊಡುವುದಿಲ್ಲ. ಆವುಗಳಾಗಿಯೇ ಆಕ್ರಮಿಸಿದಾಗ ಆವುಗಳನ್ನು ಸ್ವೀಕರಿಸಲೇಬೇಕಾಗುತ್ತದೆ. ಆಗ ಪ್ರಥಮ ಹಂತದಲ್ಲಿ ತನಗೆ ಸಾಧ್ಯವಿದ್ದ ಪ್ರಯತ್ನಗಳನ್ನು ಮಾಡಿ ಆ ಕಷ್ಟಗಳಿಂದ ಪೊರಬರಲು ಧಪಡಿಸುತ್ತಾನೆ. ಆದು ಸಾಧ್ಯವಾಗದಿದ್ದಾಗ ಕೈ ಚೆಲ್ಲಿ ಕೂಡುವಾಗ ದೇವರ ಮೊರೆ ಹೋಗುತ್ತಾನೆ. ಘಟನೆ ತಂತಾನೆ ನಡೆದು ಹೋಗುತ್ತದೆ. ಆದರಿಂದ ಆ ಘಟನೆಗಳನ್ನು ತಿದ್ದಲೂ ಆಗುವುದಿಲ್ಲ, ತಪ್ಪಿಸಲೂ ಆಗುವುದಿಲ್ಲವೆಂಬುದು ಸತ್ಯ! ಮನಸ್ಸಿಗೆ ಸಮಾಧಾನವೆನಿಸುವಂತೆ ಆಥವಾ ಕಷ್ಟಗಳನ್ನು

ಸಹಿಸುವ, ಪಾಪಾತ್ಮವ ಮನೋದಾರ್ಢ್ಯ ದೊರೆತಾಗ 'ದೇವರು ಪಾಪ ಮಾಡಿದ' ಎಂದ. ಆಗ ದಿದ್ದಾಗ ವೇಳೆ ಕಿಮ್ಮುದು, ದೇವರು ಕೋಪಿಸಿಕೊಂಡಿದ್ದಾನೆ, ಕರ್ಮ ಎಂಬಿತ್ಯಾದಿಗಳಿಂದ ಕಷ್ಟಗಳನ್ನು ಅನುಭವಿಸುತ್ತಿರುತ್ತಾ ಸಮಾಧಾನ ತಂದುಕೊಂಡ.

ದೇವರು-ಧರ್ಮ

ಈ ದೇವರು ತುಂಗವಾಗಿ ರೂಪುಗೊಂಡ ಧರ್ಮ, ಮತ. ವಾಧಾಳು ಧಾರಣೀಯರ ಅನೈಕ್ಯ-ಅಸಂಘಟನೆಗಳ ಪ್ರತೀಕವೆಂಬ ಮೂರು ಇವೆ. ಯಾಕೆಂದರೆ ದೇವರ ಹೆಸರಲ್ಲಿ ಹುಟ್ಟಿದ ನೂರಾರು ಮತಗಳಿಂದ ಜನರು ಬೇರೆ ಬೇರೆಯಾದರು. ಆಗ ಒಂದು ಮತವೂರು ಇನ್ನೊಂದು ಮತದ ವಕ್ತುನ್ನು ಸೇರಲಿಲ್ಲ. ಅದು ಕಾರಣ ಅನೈಕ್ಯಕ್ಕೆ ದಾರಿಯಾಯಿತು ಎಂದು ವಾದವೂ ಇವೆ. ಮೇಲು ಅವತಿಯ ಸಂಕೇತವೆನಿಸುತ್ತದೆ. ಹಾಗೆ ಹೇರುವುದರಿಂದ ಅವರುಗಳಲ್ಲಿ ಹುಟ್ಟುವ ಅಥವಾ ಹುಟ್ಟಬಹುದಾದ ಹೊಸ ಹೊಸ ವಿಚಾರಗಳನ್ನು ಪತ್ತಿಕ್ಕದಂತಾಗುತ್ತದೆ. ಮತ್ತು ಅದರಿಂದ ಒಂದು ಜನಾಂಗದ ವಿಕಾಸವನ್ನು ತಡೆ ಹಿಡಿದಂತಾಗುತ್ತದೆ. ಆದ್ದರಿಂದ ನಾವು ಯೋಚಿಸುವ ವಿಚಾರಗಳು ಇನ್ನೊಬ್ಬನಿಗೆ ಬುಧಸವಾಗಬಾರದು.

ದೇವರಿದ್ದಾನೆ ಎನ್ನುವುವಾಗಲಿ, ದೇವರಿಲ್ಲ ಎನ್ನುವುವಾಗಲಿ, ದೇವರ ಪಟಗಳನ್ನು ಹರಿದೊಗೆಯಿರಿ ಗಟಾಕ್ಕೆಸೆಯಿರಿ ಎನ್ನುವ ಮಾತುಗಳು ಅವರವರ ಶುದ್ಧ ಸ್ವತಂತ್ರ ವಿಚಾರಗಳ ಮೋಕವೇ ಸೈ. ಆದರೆ ಅವುಗಳನ್ನು ನೀವೂ ಒಪ್ಪಿರಿ ಎನ್ನುವುದು ದೊಡ್ಡ ಮೂರ್ಖತನ ಎನಿಸುತ್ತದೆ. ಬಲಾತ್ಕಾರ ಅಥವಾ ವಿಷಯಗಳ ಕುರಿತು ಪಟ್ಟು ಹಿಡಿದು ಕುಳಿತುಕೊಳ್ಳುವುದು ಶತಮೂರ್ಖತನವಾದರೆ, ಬಲಾತ್ಕಾರದಿಂದ

ಯಾಕೆ ಈ ದೇವರು ?

ನೋಟಕ್ಕೆ ಇದು ಸರಿ ಎನಿಸಿದರೂ ತುಸು ಆಳವಾಗಿ ಯೋಚಿಸಿದರೆ ಅದರಲ್ಲಿ ಅಂಥ ಪ್ರಮಾದವೇನೂ ಆಗಲ್ಲವೆಂಬುದು ಗೋಚರವಾಗುತ್ತದೆ. ಪ್ರತಿಯೊಂದು ಕಾರ್ಯ ಸ್ವಾತಂತ್ರ್ಯದ ಪ್ರತೀಕವೆಂದೇ ಸಿದ್ಧವಾಗುತ್ತದೆ. ಆದೇ ಮತಗಳಿಗೆ ತಾಯಿ ಎನಿಸಿದ ಧಾತವು ಅನಾದಿಯಿಂದಲೂ ಸ್ವತಂತ್ರವಾಗಿ ವಿಜೃಂಭಿಸುತ್ತದೆ. ಭಾರತೀಯ ರಷ್ಟು ಸ್ವತಂತ್ರವಾಗಿ ವಿಚಾರಿಸುವವರು, ಅವರಿಗಿದ್ದ ವೈಚಾರಿಕ ಸ್ವಾತಂತ್ರ್ಯ, ಜಗತ್ತಿನ ಇನ್ನಾವ ಜನಾಂಗಕ್ಕೂ ಇಲ್ಲ. ಇರಲಿಲ್ಲ. ಆದರೆ ಇದು ಕೇವಲ ದೇವರನ್ನು ಮಡಿಕುವ ವಿಷಯದ ಮಟ್ಟಿಗೆ ಎಂಬುದನ್ನು ನೆನಪಿಡಬೇಕು.

ವಾಸ್ತವದಲ್ಲಿ ಏಕಮತ್ಯವಾಗಲೀ, ಸಂಘಟನೆಯಾಗಲೀ ಕೃತ್ರಿಮವಾಗಿರಬಾರದು. ಬಲಾತ್ಕಾರದಿಂದ ಜನರ ಮೇಲೆ ಹೇರಿದ ಏಕಮತ್ಯವಾಗಲೀ, ಸಂಘಟನೆಯಾಗಲೀ ಆ ಜನಾಂಗದ ಆ ವಿಚಾರಗಳನ್ನು ಒಪ್ಪಿಸುವುದು ಸಹಸ್ರ ಮೂರ್ಖತನ ಎನಿಸುತ್ತದೆ. ಈ ಮೂರ್ಖ ಶಿಖಾಮಣಿಗಳ ಆಶೀರ್ವಾದದಿಂದ ಅವರನ್ನು ಅನುಕರಿಸುವ ಜನಾಂಗವೆಲ್ಲ ಇನ್ನೂರಿವರಿಗಿಂತ ಹಿಂದೆ ಬೀಳುತ್ತದೆ. ಅಥವಾ ಅಂಥ ವಿಚಾರಗಳು ಯಾವನೊಬ್ಬ ಮುಂದೆ ಬರಲು ಅಡ್ಡಿಯಾಗುತ್ತವೆ. ಒಬ್ಬ ಕ್ರಿಸ್ತ, ಒಬ್ಬ ಪೈಗಂಬರ, ಒಬ್ಬ ಶಂಕರ, ರಾಮಾನುಜ, ಮಧ್ವರ ಧಾತುಗಳೇ ಒಂದು ಜನಾಂಗಕ್ಕೆಲ್ಲ ಕೊನೆಯ ಮಾತುಗಳಾಗಬೇಕೆ? ಇದು ವಿಚಾರಣೀಯ ಅಂಶ.

ದೇವರಿಲ್ಲ ಮತ್ತು ದೇವರಿದ್ದಾನೆ ಎಂಬ ಮತಗಳು ದೇವರ ಹುಟ್ಟಿಸಿದ ಜತೆ ಜತೆ ಯಾಗಿಯೇ ಬಂದಿವೆ ಎಂಬುದು ಗಮನಾರ್ಹ. ಇನ್ನೊಬ್ಬರ ವಿಚಾರಸ್ವಾತಂತ್ರ್ಯವನ್ನು ಒಪ್ಪಿ ಅವನು ತನಗೆ ಒಪ್ಪುವ ಮತವನ್ನು ಸ್ವೀಕರಿಸುವುದು ಹಾಗು ಪ್ರಚಾರಪಡಿಸುವುದಕ್ಕೆ

ಅವಕಾಶ ನೀಡುವುದು ನಮ್ಮಲ್ಲಿ ಎಂದಿನಿಂದಲೂ ಬಂದಿದೆ. ಈ ಉದಾರ ಮನೋವೃತ್ತಿಯ ಪ್ರತೀಕವಾಗಿಯೇ ನಮ್ಮ ದೇಶದಲ್ಲಿ ಇಂದು ನೂರಾರು ಮತಗಳು ನೆಲೆಸಿವೆ. ಇದು ನಿಜವಾಗಿಯೂ ಒಂದು ದೃಷ್ಟಿಯಿಂದ ಅಭಿಮಾನ ಪಡಬೇಕಾದ ಸಂಗತಿ. ಇಷ್ಟರವರೆಗೂ ನಾವು ಸ್ವತಂತ್ರ ವಿಹಾರಿಗಳು. ಆದರೆ ಒಬ್ಬ ತನ್ನ ವಿಚಾರಗಳನ್ನು, ತನ್ನ ವಿಚಾರಸ್ವಾತಂತ್ರ್ಯದಿಂದ ಕಂಡ ತತ್ವಗಳನ್ನು ಇನ್ನೊಬ್ಬನ ಮೇಲೆ ಹೇರುತ್ತ ಬಂದಿನ ನಮ್ಮ ಅವನತಿಗೆ ಪ್ರಾರಂಭವಾಯಿತು. ಅದುವೆ ನಾವು ಇಂದು ಅನುಭವಿಸುತ್ತಿರುವ ಧಾರ್ಮಿಕ ದಾಸ್ಯದ ಬೇರು.

ಶಂಕರಾಚಾರ್ಯರ ಮತ ಅವರೆ ದೃಷ್ಟಿಯಿಂದ ಸತ್ಯವಾಗಿರಬೇಕು. ಅದರೆ ಅದು ಇನ್ನೊಬ್ಬನಿಗೆ ಬಲಾತ್ಕಾರದಿಂದ ಕೊಟ್ಟು ದೀಕ್ಷೆ ಯಾಗಬಾರದು. ಧಾರ್ಮಿಕ ರಂಗದಲ್ಲಿ ವಿಶೇಷತಃ ಸೋಡಲು ಕೂಡ ನಮಗೆ ಅಸ್ಪದವಿಲ್ಲ. ನೋಡಿದ್ದಾದರೆ ಧರ್ಮಲಂಡರೆನಿಸಿ ಧರ್ಮದ್ರೋಹದ ಬಿರುದನ್ನು ದಯಪಾಲಿಸಲಾಗುತ್ತದೆ.

ನಾನು ಮಾಧ್ವ, ಅದು ಹೇಗೆಂದರೆ ನನ್ನ ಅಪ್ಪ ಅಮ್ಮ ಮಾಧ್ವರು. ನನ್ನ ಅಪ್ಪ ಅಮ್ಮ ಮಾಧ್ವರೆ ನಿಸಿದ್ದು ಅವರ ಅಪ್ಪ ಅಮ್ಮಂದಿರಿಂದ. ಈ ಸಂಬಂಧವನ್ನು ಮಧ್ವಾಚಾರ್ಯರ ವರೆಗೂ, ಬೇಕಿದ್ದರೆ ಜಮದಗ್ನಿಯ ಬ್ರಹ್ಮನವರೆಗೂ ಬೆಳೆಸಬಹುದು. ಆದಕ್ಕಿಂತ ಹೆಚ್ಚಿನದನ್ನು ತಿಳಿಯುವ ಪ್ರಯತ್ನ ಮಾಡಲೇ ಇಲ್ಲ. ತಿಳಿದವರು ಸ್ವಯಂಪ್ರೇರಿತ ಯೆಲ್ಲುಳಿದ ಸಾಧ್ಯವಿದ್ದಷ್ಟು ನಮ್ಮಲ್ಲಿ ಪರಂಪರಾಗತ ಮುದ್ರೆಯನ್ನು ಸ್ವೀಕರಿಸಲು ಪ್ರಯತ್ನಿಸಿದರೇ ಹೊರತು ಅದನ್ನು ತಿಳಿದುಕೊಳ್ಳಲು ಅವಕಾಶವನ್ನೇ ಮಾಡಿಕೊಡಲಿಲ್ಲ. ಮತಾಚಾರ್ಯರ ಮಾತುಗಳೇ ವೇದವಾಕ್ಯಗಳೆಂದೂ ಅವುಗಳನ್ನು ಪ್ರಶ್ನಿಸುವುದು ಮಹಾ ಪಾತಕ

ಯಾಕೆ ಈ ದೇವರು ?

ಹಿಂದೂ ಮತಗಳಲ್ಲಿ ಅವ ಅತಿ ದೊಡ್ಡ ಅನಾ ಹುತವೆಂದರೆ ಇದು! ಇದನ್ನು ಪ್ರಾರಂಭಿಸಿದವರು ಆ ಮತಗಳ ಪ್ರವರ್ತಕರು ಹಾಗು ಅವನ್ನು ಮುಂದುವರಿಸಿಕೊಂಡು ಬಂದ ಪ್ರಚಾರಕರು ಮತ್ತು ಕೆಲ ಸ್ವಾರ್ಥಸಾಧಕರು. 'ಸ್ವರ್ಗ' ಎಂಬುದು ಭಾರತೀಯರ ಧರ್ಮದ ಹಾಗಿದ್ದರೂ ಆಮೂರಾಗ್ರ 'ಸ್ವರ್ಗ' ಪೋಗ ದಿದ್ದುದು ಆಘಾತವೇ ಸೈ. ಪ್ರತಿಯೊಬ್ಬ ಮತ ಪ್ರವರ್ತಕ ತಾನು ಕಂಡದ್ದೇ ಸತ್ಯವೆಂದು ಸಾಧಿಸುತ್ತ ಅದನ್ನು ಇತರರೂ ಒಪ್ಪಬೇಕೆನ್ನುವುದು, ಒಪ್ಪಿದವರ ಸಂಖ್ಯಾಬಲವನ್ನು ಪ್ರದರ್ಶಿಸುವೆಯು, ಅಪಮಹಿಮಿಕೆಯ ಪ್ರತೀಕವಲ್ಲವೆ? ನಾವು ಹುಟ್ಟುತ್ತಲೆ ಸಮುಗೊಂದು ಮುದ್ರೆಯನ್ನು ಒತ್ತಿರುವ. ಆ ಮುದ್ರೆಯೊಂದಿಗೇ ನಾವು, ಬೆಳೆದುಬಂದೆವು. ಎತ ಬಲವಲ್ಲಿ ಎಂಬ ಭಾವನೆಯನ್ನೂ ತುಂಬಲಾಯಿತು. ಜೊತೆಗೆ ಇನ್ನೊಂದು ಮತ—ಮತಾಚಾರ್ಯರ ಕುರಿತು ತಿಳಿಎಳಕೆ ಕೊಡುವಾಗ ಸಾಧ್ಯವಿದ್ದಷ್ಟು ದ್ವೇಷವನ್ನು, ತಿರಸ್ಕಾರವನ್ನು ತುಂಬುತ್ತ ಬಂದರು. ಈ ತಪ್ಪನ್ನು ಎಲ್ಲಿ ಮತದವರೂ ಎಲ್ಲ ಕಾಲದಲ್ಲಿಯೂ ಮಾಡುತ್ತ ಬಂದಿದ್ದಾರೆ. ಯಾವುದೇ ಒಂದು ಮತದ ಅರ್ಥ ಸ್ಪಷ್ಟವಾಗಿದ್ದರೂ ಅದನ್ನು ತಿಳಿದುಕೊಳ್ಳಲು ನಾವು ಪ್ರಯತ್ನಿಸಲಿಲ್ಲ. 'ಮತ' ಎಂದರೆ ಅದೊಂದು 'ಅಭಿಪ್ರಾಯ' ಅಥವಾ 'ಅನಿಸಿಕೆ.' ದೇವರ ಕುರಿತು ಅಥವಾ ಇತರ ಕುರಿತು ಇಂಥವರ ಅಭಿಪ್ರಾಯ, ಅನಿಸಿಕೆ ವಿಚಾರಗಳೇ ಮೊತ್ತು ಅದು ಧರ್ಮವೂ ಆಗಲಾರದು, ಪಂಥವೂ ಆಗಲಾರದು. ಆದರೆ ಯಾವುದೊಂದು ಮತವನ್ನು ನಾವು ಪಂಥವಾಗಿಸಿಕೊಂಡಮ್ಮು ನಮ್ಮ ಪುರದೃಷ್ಟ. ಅಭಿಪ್ರಾಯದ ದೃಷ್ಟಿಯಿಂದ ಯಾವ ತತ್ವಜ್ಞಾನಿಯೂ ತಪ್ಪಿರಲಿಕ್ಕಿಲ್ಲ. ಅವನೂ

ಒಬ್ಬ ವಿಜ್ಞಾನಿಯೇ ಆಗಬಹುದು, ಆದರೆ ಅದನ್ನು ಪುನಃ ಪರೀಕ್ಷಿಸಿನುಪುದು ಎಲ್ಲರ ಹಕ್ಕಾಗಿದೆ. ಅದನ್ನು ತಿಳಿಯದೆ ಸುಮ್ಮನೆ ಕುರುಡು ನಂಬಿಕೆಯಿಂದ ಆವರ ಬೆನ್ನು ಹತ್ತುವುದು ತಪ್ಪು. ಯಾರೊಬ್ಬರ ವಿಚಾರಗಳಿಗೆ ಪ್ರಭೋದನೆ ಕೊಡಲು ಹಿಂದಿನವರ ವಿಚಾರಗಳು, ಅಭಿಪ್ರಾಯಗಳು ಸಾಧನವಾಗಬೇಕೆ ಹೊರತು ಆವರ ಮತ ಗಳಿಗೇ ಅಂಟಿಕೊಳ್ಳಬಾರದು ಅಥವಾ ಮತೀಯ ರಾಗಬಾರದು. ಆ ದೃಷ್ಟಿಯಿಂದ ಇನ್ನಷ್ಟು ಖಚಿತವಾಗಿ ಹೇಳುವುದಾದರೆ ಮಾಧ್ವನೆನಿಸುವ ನಾನು ಮಧ್ವರ ಅಭಿಪ್ರಾಯಗಳನ್ನು ನನ್ನ ಜೀವನಕ್ಕೆ, ನನ್ನ ವಿಚಾರಗಳಿಗೆ ಅನುಕೂಲವಾಗುವಂತೆ ಬಳಸಿಕೊಳ್ಳಲು ಅಡ್ಡಿ ಏನಿಲ್ಲ. ಉದಾಹರಣೆಗೆ ದೊಪಸೊಬ್ಬ ತಾನು ತಾನಾಗಿಯೇ ಉಳಿಯಬೇಕಾದರೆ ಆದು ಮಧ್ವರ ಅಭಿಪ್ರಾಯದಲ್ಲಿ ಮಾತ್ರ ಸಾಧ್ಯ. ನಾನು ಮತ್ತು ಉಳಿಸಿಕೊಳ್ಳಲು ಬೆಳೆಸಿಕೊಳ್ಳಲು ಆತೆ ತಾನಾಗಿಯೇ ಉಳಿಯಬಯಸುತ್ತಾನೆ ಏನಾ ಇನೊಬ್ಬರಿಂತೆ ಆಗಬಯಸುವುದಿಲ್ಲ. ಆಷ್ಟರ ಮಟ್ಟಿಗೆ ಮಾಧ್ವನೆಂಬ ಮುದ್ರಿಕೆಯನ್ನೊತ್ತಿದ್ದರೆ ಆದರಲ್ಲಿ ನಾಚಿಕೆಪಡುವ ವಿಷಯವೇನಿಲ್ಲ. ಮುದ್ರಿಕೆ ಇರವ ವ್ಯಕ್ತಿಯೊಬ್ಬ ಇದನ್ನು ಒಪ್ಪಿ ಕೊಂಡರೂ ಮಾಧ್ವನೇ ಎಂದರೂ ತಪ್ಪಿಲ್ಲ. ಇಲ್ಲಿ ಖ್ಯಾತ ವಿಜ್ಞಾನಿ ಐನ್‌ಸ್ಟೈನರ ಒಂದು ಮಾತನ್ನು ಉದಾಹರಿಸಬಹುದು:

"Let every man judge according to his own standards, by what he has himself read, not by what others tell him."

ಹೀಗೆ ಪ್ರತಿಯೊಂದು ಮತದ ಕುರಿತೂ ಪ್ರತಿಯೊಬ್ಬನಲ್ಲಿ ತನ್ನದೇ ಆದ ವಿಶ್ಲೇಷಣೆ ಇರುವುದು ಅಗತ್ಯವಾಗಿದೆ. ಅದನ್ನು ಬಿಟ್ಟು

ಯಾಕೆ ಈ ದೇವರು ?

ಇತರರು ಭಿನ್ನರಾಗಿದ್ದೇವೆ. ಆದು ನಿಜವೂ ಆಹುದು. ನಾನು ಇತರರಲ್ಲಿಯ ಒಬ್ಬನೇ ಹೊರತು ಇತರರೇ ನಾನಾಗಲಾರೆ. ಇತರರಂತೆಯೂ ಅಲ್ಲ. ನಾನು ನಾನೇ, ನೀವು ನೀವೇ, ಆವರು ಆವರೇ. ವಾಸ್ತವದಲ್ಲಿ ಇದು ಸತ್ಯವಾದದ್ದು. ಎಲ್ಲರಿಗೂ ಎರಡು ಕಣ್ಣು, ಕಿವಿ, ಕೈಕಾಲುಗಳಿವೆಯೆಂದು, ಬುದ್ಧಿ ಇದೆಯೆಂದು ಮನುಷ್ಯರು ಎನ್ನಬಹುದೇ ಏನಾ ವೈಯಕ್ತಿಕವಾಗಿ ವಿಚಾರಿಸಿದಾಗ ಪ್ರತಿಯೊಬ್ಬರ ರೂಪ, ಆಕಾರ, ಬುದ್ಧಿ ಭಿನ್ನವಾಗಿದೆ ಎಂಬುದು ಸತ್ಯವಾಗಿದೆ. ನೀನೇ ನಾನು ಎಂಬುದು ಅದ್ವೈತ. ಆದರೆ ಆದು ಅಸಾಧ್ಯ. ನಿನ್ನಂತೆ ನಾನು ಎಂಬುದು ವಿಶಿಷ್ಟಾದ್ವೈತ — ಆದು ಕೂಡ ಕೊನೆಯ ಪಂಕ್ತಿಯಲ್ಲಿ ತಪ್ಪು ಎಂದು ಗೋಚರವಾಗದಿರದು. ನಾನು ನಾನೇ, ನೀನು ನೀನೇ ಎಂಬುದು ದ್ವೈತ. ದೊಪಸೊಬ್ಬ ತನ್ನ ಸ್ವಂತಿಕೆಯನ್ನು ಯಾವುದು ಶತ್ರು ತಿಳಿದಿರಲಿ ಬಿಡಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ವೀರಶೈವ ಎಂಬ ಮುದ್ರೆಗಳನ್ನು ಒತ್ತಿಕೊಂಡು ದಾಸ್ಯವನ್ನು ಪ್ರದರ್ಶಿಸಿಕೊಳ್ಳುವುದು ತಪ್ಪು.

ನಾವು ನಡೆದ ದಾರಿಗೆ ಬೆಳಕು ಆವಶ್ಯ. ಆದರೆ ಬೆಳಕು ಇದೆಯೆಂದು ನಮ್ಮ ಕಣ್ಣುಗಳನ್ನು ಮುಚ್ಚಿ ಕುಳಿತುಕೊಂಡರೆ ನಡೆದಂತಾಗುವುದಿಲ್ಲ. ನಡೆಯಲು ಕಣ್ಣುಗಳ, ಕಾಲುಗಳ ಅವಶ್ಯಕತೆಯೂ ಇದೆ-ಜೊತೆಗೆ ಕೊಂಚ ಬುದ್ಧಿ ಕೂಡ! ಹಾಗೆ ನಾವು ನಡೆವ ದಾರಿಗೆ ಬೇಕಾದರೆ ಈ ಯಾರೊಬ್ಬರ ಅಭಿಪ್ರಾಯಗಳ ಬೆಳಕಿನ ಸಹಾಯವನ್ನು ಆದೂ ಆವಶ್ಯ ಎನಿಸಿದರೆ ಪಡೆಯಬಹುದು. ಹೀಗೆಲ್ಲ ಹೇಳುವಾಗ, ಇನ್ನ ವಿಚಾರಶಕ್ತಿ ಎಷ್ಟು ಜಾಗರಲ್ಲಿದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರ ದೊರಕುವುದು ಕಠಿಣ. ಯಾಕೆಂದರೆ ಎಲ್ಲರೂ ಆಷ್ಟೇ

ವಿಚಾರಶಕ್ತರು ಎಂದು ರಾಜಕೀಯವಾಗಿ ಹೇಳಿ ಮತಗಳನ್ನು ಪಡೆಯಬಹುದೇ ವಿನಾ ಬೌದ್ಧಿಕವಾಗಿ ಹೇಳುವುದು ಆಭಾಸವೆನಿಸುತ್ತದೆ. ಸಮತಾವಾದದ ಇಂದಿನ ದಿನಗಳಲ್ಲಿ ಇಂಥ ಮಾತುಗಳು ವಿವಾಸ್ಪದ. ಆದರೆ ಪ್ರತ್ಯಕ್ಷದಲ್ಲಿ ಎಲ್ಲರೂ ಆಷ್ಟೇ ವಿಚಾರಶಕ್ತರು ಎಂದು ಹೇಳುವುದೂ ರಾಜಕೀಯ! ಬೌದ್ಧಿಕವಾಗಿ ಆಶಕ್ತರಾದವರನ್ನು ವಿಚಾರಿಸಲು ಶಕ್ತರಾಗುವಂತೆ ಸುವಿಧೆಗಳನ್ನು ಕಲ್ಪಿಸಬೇಕು. ಆದರೆ ಆವಶ್ಯಕತೆ ಮಾಪನ ಆದರಿಂದ ಉಂಟಾಗುವ ದ್ವೇಷಕ್ಕೆ ತಡೆ ಇರಬೇಕು.

ಪಾಪ ಪುಣ್ಯ, ನೀತಿ ಅನೀತಿ ಇವೆಲ್ಲ ಮನುಷ್ಯ ಕೃತ ಕಲ್ಪನೆಗಳು. ಜೀವನದ ದಿಕ್ಕು ಬದಲಾದಂತೆ ಆದು ತನ್ನ ಕಟ್ಟು ಪಾಡುಗಳನ್ನು ಬದಲಾಯಿಸಿಕೊಳ್ಳುತ್ತ ಬಂದಿದೆ ಎಂಬ ವಿಚಾರ-ಸರಣಿ ಆಕರ್ಷಣೀಯವೇನೋ ನಿಜ. ಆದರೆ ವಿಶ್ವದ ಕಾರಣಕರ್ತನ ಇರುವನ್ನು ತೀರ್ಮಾನಿಸುವುದು ನಮ್ಮ ನಿಯಮಿತ ಬುದ್ಧಿಯ ವ್ಯಾಪ್ತಿಯನ್ನು ಮೀರಿದುದು. ಆಲ್ಲದೆ ವ್ಯಾಪ್ತಿಯಿಂದಲೇ ದೇವರು ನಮ್ಮೆಲ್ಲ ತರ್ಕ, ಊಹಾಪೋಹಗಳಿಗೆ ಮೀರಿಯೇ ಇರಬೇಕಲ್ಲವೆ? ಇಲ್ಲದೆ ಹೋದರೆ ಆವನಿಗೂ ಜಗತ್ತಿನ ಇತರ ಪದಾರ್ಥಗಳಿಗೂ ಸುಲಭ ಸಾಮ್ಯ ಉಂಟಾಗುತ್ತದೆ. ದೇವರ ಆಸ್ತಿತ್ವ, ಅಳಿವುಗಳು ಪ್ರತಿಯೊಬ್ಬನ ನಂಜಿಕೆಯ ಮೇಲೆಯೇ ಆವಲಂಬಿಸಿ ನಿಂತಿಲ್ಲ. 'ನನಗೆ ಗೊತ್ತಿಲ್ಲ!' ಎಂಬುದಷ್ಟೇ ಆವಕ್ಕೆ ಉತ್ತರವಾಗುತ್ತದೆ. ಮತ್ತು ಆದೇ ಆಜ್ಞೇಯ ವಾದ ಎನಿಸುತ್ತದೆ. ಆಸ್ತಿಕ-ನಾಸ್ತಿಕ ವಾದಗಳ ಪಟಮಾರಿತನ ಒತ್ತಾಯಗಳು ಆಬೌದ್ಧಿಕ-ತರ್ಕಶೂನ್ಯವೆಂದು ಈ ವಾದ ನಿರ್ಧರಿಸುತ್ತದೆ.

ಇಷ್ಟಾಗಿಯೂ ನಮಗೆ ಬೇಕಿರಲಿ

ಯಾಕೆ-ಈ ದೇವರು ?

ಆದು ಆಷ್ಟೇ ಆವಾಯಕಾರಿಯಾಗಿದೆ. ಕಾಲ ಕಾಲಕ್ಕೆ ಪರಿಸ್ಥಿತಿಗನುಗುಣವಾಗಿ ಜೀವನ ಒಂದು ಪ್ರವಾಹದಂತೆ ಗತಿಯನ್ನು ಬದಲಾಯಿಸುತ್ತ ಬಂದಿದೆ. ಆದರೆ ಈ ಪ್ರವಾಹ ಒಂದು ನಿರಂತರ ಶಾಶ್ವತ ಆತಃಸತ್ವವನ್ನು ಉಳಿಸಿಕೊಂಡುಬಂದಿದೆ. ಆದೇ ಒಳಕಿನ ಮೂಲಭೂತ ಪ್ರಜ್ಞೆ. ಈ ಪ್ರಜ್ಞೆ ಇಲ್ಲದೆ ಹೋಗಿದ್ದರೆ, ಮನುಷ್ಯ ಹಿಂದಿನ ಕಾಲದ ವೈಶ್ಯಾಕಾರದ ಸ್ವನಿಗಳಂತೆ ಎಂದೋ ನಾಶವಾಗಿ ಹೋಗಬೇಕಾಗಿತ್ತು. ಈ ಇಪ್ಪತ್ತು ಶತಮಾನಗಳಲ್ಲಿ ಆಥವಾ ಆದಕ್ಕಿಂತ ಹೆಚ್ಚಿನ ಎಷ್ಟೋ ದಿನಗಳಲ್ಲಿ ಮಾನವನ ನಾಗರಿಕತೆಯ ಏಳು ಬೀಳುಗಳನ್ನು ನೋಡಿದಾಗ ನಾವು ಆವ್ಯಗಳಿಂದ ಪಡೆಯುವ, ಪಡೆಯಬಹುದಾದ ಜ್ಞಾನ-ಆರಿವುಗಳ ವ್ಯಾಪ್ತಿ ಗೋಚರವಾಗುತ್ತದೆ.

ಶತಮಾನಗಳ ಶ್ರೀಮಂತ ಆನುಭವದ ಸಿರಿ

ಬೇಡವಾಗಿರಲಿ ದೇವರು ಮತ್ತು ಧರ್ಮ ಗಳು ಪ್ರಸ್ತಾ ಸಮಾಜವನ್ನಲ್ಲಿ ಮಹತ್ವದ ಸ್ಥಾನ ವನ್ನು ಪಡೆದಿವೆ. ಪ್ರಸ್ತಾ ಸಮಾಜದ ಆಗು ಹೋಗು, ಸಂಸ್ಕೃತಿಯನ್ನು ಅರ್ಥ ಮಾಡಿಕೊ ಳ್ಳಲು ಇವರ ಸಂಶೋಧನೆ ಬೌದ್ಧಿಕವಾಗಿ ಅವಶ್ಯವಾಗಿದೆ. ಅದರೆ ಸಮೃದ್ಧಿಯ ನಿರ್ಮಾಣ ಮತ್ತು ಮುಂದುವರಿಕೆಯಲ್ಲಿ ದೇವರು ಮತ್ತು ಧರ್ಮಗಳ ಪಾತ್ರವನ್ನು ಆಲೋಚಿಸುವಾಗ ವಿನಾಕಾರಣ ರೋಷ, ವಾದ್ವಿಕ ಆಸಕ್ತಿಗಳು ಸರಿಯಾದುವಲ್ಲ. ಪೂರ್ವಾಗ್ರಹ, ನಿಷ್ಪಕ್ಷಪಾತ ದೃಷ್ಟಿ ಬೇಕು. ಇದು ನಿರೀಶ್ವರವಾದಿಗಳಿಗೆ, ಮತ್ತು ಹಿಂದೂ ವರ್ಣಪದ್ಧತಿಯಲ್ಲಿ ಬಂದುದೆಲ್ಲ ವನ್ನೂ ಮೇಲೆತ್ತಿ ಹಿಡಿದುವ ಅಭಿಮಾನಿ ಗಳಿಗೆ ಸರಿಹೋಗುವುದಿಲ್ಲ. ಆದ್ದರಿಂದ ಇವೆ ರಡನ್ನೂ ಬಿಟ್ಟು ಇದೂ ಮಾಂಟೆ ಬರಬೇಕಾಗಿದೆ. ಜನಸಾಮಾನ್ಯನಿಗೆ ಧರ್ಮ ಬೇಕೆ? ಪೊಟ್ಟೆ ಹೇಳಿಕೊಳ್ಳುತ್ತಿದ್ದರೂ ಈ ವರೆಗೆ ವಿಚಾರಿಸಿ ದ್ದೇನು? ನಮ್ಮ ಹಿರಿಯರೆಲ್ಲ ಕಂಡದ್ದೇನು? ಅವರ ಉತ್ತರ ದೇವರು ಎಲ್ಲಿದ್ದಾನೆ? ಆತನ ಆಕಾರ ಎಂಥದು? ಅಂಥ ಸಾಕಾರ ದೇವರಿಂದ ನಮಗೆ ಸಿಗುವ ಮೋಕ್ಷ, ಧನ್ಯತೆ, ಶಾಂತಿ, ಶೂನ್ಯ ಇತ್ಯಾದಿ ಆಯಿತು, ಇಷ್ಟಕ್ಕೆ ನಿಂತಿತು ನಮ್ಮ ವಿಚಾರ. ತುಸು ಮುಂದುವರಿದರೆ, ನಾವೇ ದೇವರಾಗುತ್ತೇವೆ. ಇವನ್ನೇ ಸಾವಿರಾರು ಋಷಿ ಗಳು, ಯತಿಗಳು, ಅಥವಾ ದಾರ್ಶನಿಕರು ಬಾಬಾಗಳು, ಬೀಜೀಗಳೂ ಚರ್ಚಿಸುತ್ತ ಬಂದರು, ಬರುತ್ತಲೇ ಇದ್ದಾರೆ. ಇದರೊಂದಿಗೆ ಇವರ ಪ್ರಚಿಪಕ್ಷವೊಂದು ಅಂದಿನಿಂದಲೂ ಇವನ್ನು ವಿರೋಧಿಸುತ್ತ ಬಂದಿದೆ. ಈ ದೇವರು ಎಂಬುವವನು ಇಲ್ಲ, ಆವನೆ ಆಕಾರವಿಲ್ಲ. ಅಂಥ ದೇವರ ಅವಶ್ಯಕತೆ ಇಲ್ಲ. ಇರುವವರೆಗೆ ಸುಖದಿಂದ ಇರಿ, ಸಾಲ ಮಾಡಿದಾದರೂ ತುಪ್ಪ

ಯಾಕೆ ಈ ದೇವರು ?

ತುಂಬಿಪವನೆ ವೃಥಾ ಕಾಲಹರಣಕ್ಕೆ ವೇದಾಂತ ಬೇಕೆಂದಾ ಇಟ್ಟುಕೊಂಡರೂ ಪ್ರಸ್ತವದಲ್ಲಿ ಆವಶ್ಯಕ ಆದರಿಂದ ಯಾವ ಪ್ರಯೋಜನ ಇಲ್ಲ.

ಹಿಂದೊಮ್ಮೆ ಬ್ರಾಹ್ಮಣ ಪೆರೆದ ಎಂಬ ಕಾರಣದಿಂದ ಇಂಥ ಅವಸ್ಥೆಯನ್ನು ತಳೆದು ಉಳಿದಾದ ಮರೆಯಾದೇಸಿದರೆ ಈ ಉಳಿ ದವನ್ನೂ ಮಹಾಪ್ರಾಣನೆಂದು ಕರೆಯ ಬೇಕಾದೀತು! ನಾವು ಇಂಥ ಹೊಡೆತ್ತಿರುವ ಅನೇಕ ಜಿಲ್ಲಪಣಗಳಲ್ಲಿ ಎಷ್ಟು ನಿಷ್ಪಾಪ ಜೀವಿಗಳು ನಾಯಿತ್ತವೆ ಎಂಬುದರ ಅರಿವು ನಮಗಿಲ್ಲ. ಕೈಬೆಳೆ ಮೇಲೆಯೆಸುವಷ್ಟು ಜನರ ಪಟ್ಟು, ಆದರೆ ಹಿಪಾಸ್ಪತ್ರೆಗಳಿಗೆ ಉಳಿದವರು ವಿನಾಕಾರಣ ಬಲಿಯಾದೇಕೆ? ಈ ಮಾತು ಎಲ್ಲ ಜಾತಿ ಮತ ಪಂಥಗಳಿಗೂ ಅನ್ವಯಿಸುತ್ತದೆ.

ಸಾಪ್ತ ಜಗತ್ತಿನಲ್ಲಿಯೆ ಅದ್ವಿತೀಯ ಆಧ್ಯಾ ತ್ಮವಾದಿಕೆಂದು, ಸ್ವತಂತ್ರ ವೈಚಾರಿಕರೆಂದು ತ್ನಿರಿ ಇತ್ಯಾದಿ. ಈ ವರಸ್ಸನ್ನು ಬಿಟ್ಟರೆ ಇನ್ನೇ– ನನ್ನೂ ಮಾಡಲಿಲ್ಲ. ನಮ್ಮ ವಿಚಾರಗಳೆಲ್ಲ ಒಂದು ದೇವರ ಅಸ್ತಿತ್ವದ ಕುರಿತು, ಇನ್ನೊಂದು ಆವನ್ನು ವಿರೋಧಿಸುತ್ತ ಧೀಕ ಧೋಗದ ಕುರಿತು ವ್ಯರ್ಥವಾಗಿದೆ. ನಮ್ಮ ಕಣ್ಣ ಮುಂದಿ ರುವ ವಿಶಾಲ ವಿಶ್ವದಲ್ಲಿ ಈ ಎರಡೇ ವಿಚಾರ ಗಳವೆಯೆ? ಇದು ಬಿಟ್ಟು ಯೋಚಿಸಲು ಬೇರೆ ವಿಷಯಗಳೇ ಇಲ್ಲವೆ? ನಾವು ವಿನಾ ಕಾರಣ ಈ ಗೊತ್ತಿರದ ದೇವರು– ಅವನ ಅಸ್ತಿತ್ವ–ಅನಸ್ತಿತ್ವಗಳ ಕುರಿತು ಕವಂಗವಾಗಿ ರೂಪುಗೊಂಡ ಧರ್ಮ ಜಾತಿಗಳ ಕುರಿತು ಯಾಕೆ ವಿಚಾರಿಸಬೇಕು?

ಆಧುನಿಕ ಮಧ್ಯಮ ವರ್ಗದ ಬೌದ್ಧಿಕರ– ಲ್ಲಿಯ ಕೆಟ್ಟ ಚಟವೆಂದರೆ ತಮ್ಮ ವೈಚಾರಿ ಕತೆಯ ಬಾಗಿಲಿಗೆ ಸುಲಭ target ಗಳನ್ನೆ ಆರಿಸಿಕೊಳ್ಳುವುದು... ದೇವರು, ಧರ್ಮ,

ಜಾತಿ, ಮೂಢ ನಂಬಿಕೆ, ಲೈಂಗಿಕ ಕಟ್ಟು ಪಾಡುಗಳು ಇತ್ಯಾದಿ... ಇವಷ್ಟೇ ಅವರ ವಿಷಯಗಳಾಗುವೆ. ಸಾಮಾಜಿಕ ಆರ್ಥಿಕ ವಿಧಿ ನಿಯಮಗಳ (Norms) ಬಗ್ಗೆ ಅವರು ಸಾಮಾನ್ಯವಾಗಿ ಪೆನ ತಳೆಯುತ್ತಾರೆ. ಜೀವನವೃತ್ತಿಗಾಗಿ ಅವರು ಉಚ್ಚಿವರ್ಗ– ದವರನ್ನು ಅವಲಂಬಿಸಿರುವುದು ಹಾಗು ಅವ ರಿಗೆ ಸಮಾಜದ ವಿಶಿಷ್ಟ ವರ್ಗ ಎಂಬ ದೃಷ್ಟಿ ಯಿಂದ ಇರುವ ಸವಲತ್ತುಗಳು ಇವಕ್ಕೆ ಕಾರಣ ವಾಗಿರಬೇಕು. ಆದರೆ ಹೀಗೆ ಬಲವತ್ತರ ಕಾರಣ ಗಳಿರಬೇಕೆಂದೂ ವಿಶಿಷ್ಟ ವರ್ಗದ ಹಿತಾಸಕ್ತಿ ಗಳನ್ನು ಎತ್ತಿ ಹಿಡಿಯುವ ಸಮಾಜದ ವ್ಯವ ಸ್ಥೆಯೇ ಮೂಲತಃ ದೋಷಪೂರ್ಣವಾಗಿದೆ ಯೆಂದು ಹೇಳುವ ನೈತಿಕ ಧೈರ್ಯ ಅವರಿ ಗಿಲ್ಲದಿರುವುದು ಶೋಚನೀಯ?

ದೇಶಾದ್ಯಂತ ಬೆಳೆಯುತ್ತಿರುವ ಬಡಗಾಲ ಇದೆಯೆಂದು ಸರಕಾರಕ್ಕೋ ಇಲ್ಲವೆ ಸಂಘಟಿತ ಧರ್ಮಕ್ಕೋ ಬಾರುಕೋಲು ಬೀಸುವುದೆಂದರೆ ಗಾಳಿಯಲ್ಲಿ ಗುದ್ದಿ ಕೈ ನೋಯಿಸಿಕೊಂಡಂತೆಯೆ.

ದೇವರ ಆಸ್ತಿತ್ವವನ್ನು ಸಮರ್ಥಿಸಿಕೊಳ್ಳುತ್ತ ಆತನ ಪೆನೆನ ಲಾಭದಿಂದ ಅನೇಕ ಅನುಯಾ ಯಿಗಳನ್ನು ಪಡೆದು ಸ್ವಾಮಿಗಳಾಗಲಿ, ಬಾಬಾ ಗಳಾಗಲಿ ಕಳ್ಳರಾದರೆ ಅವರನ್ನು ಏಂಡಿಸುವ ಇನ್ನೊಂದು ವಿರೋಧೀ ಗುಂಪು ಕಳ್ಳರ ಕಳ್ಳ ರದು. ಆರ್ಥಾತ್ ನಾವೆಲ್ಲ ಈ ಎರಡರಲ್ಲಿಯೆ ಒಂದು ಗುಂಪಿಗೆ ಸೇರಿದವರಾಗಿದ್ದೇವೆ. ಒಂದು ಕಳ್ಳರದು, ಇನ್ನೊಂದು ಕಳ್ಳರ ಕಳ್ಳರದು. ಒಂದು ಸಂಪ್ರದಾಯವಾದಿ ದಾಸ್ಯ ಮನೋವೃತ್ತಿ. ಯದು ಇನ್ನೊಂದು ಅದನ್ನು ವಿರೋಧಿಸುವ ಸ್ವೇಚ್ಛಾ ಪ್ರವೃತ್ತಿಯದು. ಅಂದರೆ ಮೂರ ನೆಯ ಗುಂಪು ಇಲ್ಲವೇ ಇಲ್ಲ! ಹೀಗೆಂದು ಹೇಳುವಾಗ ಅವೆಷ್ಟೋ ಜನರಿಗೆ ಕಿಂಚಿತ್

ಯಾಕೆ ಈ ದೇವರು ?

ಸ್ಥಿತಿ, ರೊಚ್ಚಿಗೇಳಿಸುವ ದಾರಿದ್ರ್ಯ, ನಿರುದ್ಯೋಗ ಈ ಬಗ್ಗೆ ಯಾವ ಬೌದ್ಧಿಕರೂ ಚರ್ಚಿ ಸುವುದನ್ನು ಈ ವರೆಗೆ ಕೇಳಲಿಲ್ಲ. ನಿರಕ್ಷರತೆ, ವ್ಯಂಗ್ಯ, ನಂಜಿಗೇ ಇವರಲ್ಲಿ ಪ್ರಾಧಾನ್ಯ. ನಿಜ ವಾಗಿಯೂ ನಮ್ಮ ದೇಶವಲ್ಲಿ ಬಡವ–ಶ್ರೀಮಂತ ರಲ್ಲಿಯೆ ಒಡೆಯ–ಗುಲಾಮ, ಸ್ವಾಮಿ–ನಿಷ್ಠ ಸೇವಕ ಸಂಬಂಧಗಳು ಮಾನವೀಯವೆ? ಶಿಕ್ಷಣ ಕಲೆ, ಸಾಹಿತ್ಯ, ಸುಖಗಳು ಉಳ್ಳವರ ಸಂಪ ತ್ತಾಗಿರಬೇಕೆ? ತನ್ನ ಭಾವನೆಗಳನ್ನು ನಿರೂ ಪಿಸಲೂ ಆಗದ ಪಸಿವನ್ನು ಹಿಂಗಿಸಿಕೊಳ್ಳಲೂ ಆಗದ ಶ್ರೀಸಾಮಾನ್ಯನ ಒಳಿತು ಯಾರಿಂದ? ರಾಜಕಾರಣಿಗಳ ಭಾಷಣಗಳಿಂದಷ್ಟೇ ಜನ ಸಾಮಾನ್ಯರ ಒಳಿತು ಆದೀತೆ? ಪ್ರತಿಯೊ ಬ್ಬರೂ ಈ ಕುರಿತು ವಿಚಾರಿಸುವಂತಾಗಬೇಕು. ಹಾಗು ಆವರ ವಿಚಾರಗಳು ರಚನಾತ್ಮಕ ವಾಗಿರಬೇಕು. ಎಮ್ಮೆ ಎಂದರೆ ದಪ್ಪ ಚರ್ಮ ಆನ್ಯಾಯವಾಗುತ್ತಿದೆ ಎಂಬುದರ ಅರಿವೂ ಇದೆ. ಆದರೆ ಆವರಾದರೂ ಈ ಎರಡರಲ್ಲಿಯೂ ಒಂದು ಗುಂಪಿಗೆ ಸೇರಿದವರಾಗಿದ್ದಾರೆಂದು ಹೇಳದೆ ಗತ್ಯಂತರವಿಲ್ಲ.

ಸಂಪ್ರದಾಯವಾದೀ ದಾಸ್ಯ ಮನೋವೃತ್ತಿ ಎಂದರೇನು? ನಾನು ಮಾಪ್ಪ, ಆರ್ಥಾತ್ ಮಧ್ವರ ಮತದವ. ಇನ್ನೊಂದರ್ಥದಲ್ಲಿ ಆ ಮತದ ಕಾನೂನು ಕಟ್ಟಳೆಗಳಿಗೆ ನಾನು, ನನ್ನ ಕುಟುಂಬ ಒಳಗಾಗಿದ್ದೇವೆ. ಇನ್ನಷ್ಟು ತಿಳಿಯಾಗಿ ಹೇಳಬೇಕೆಂದರೆ ನಾನು ನನ್ನ ಕುಟುಂಬದವರು ಆ ಮತದ ದಾಸರು. ಈ ಜೀವನದಲ್ಲಿ ಆ ಮತದ ಕಟ್ಟಳೆಗಳನ್ನು ಉಲ್ಲಂಘಿಸಿದರೆ ಬಹಿಷ್ಕಾರಕ್ಕೆ ಗುರಿ ಯಾಗುತ್ತೇವೆ. ಅಂದ ಮೇಲೆ ಈ ತರದ ದಾಸ್ಯ ಬೇಕೆ? ಆಥವಾ ಯಾವುದಕ್ಕೂ ಸಿದ್ಧನಾಗಿ ಈ ದಾಸ್ಯದಿಂದ ಮುಕ್ತನಾಗಿ ಹೊರಬರಲೆ? ಈ ಸಮಸ್ಯೆ ಪ್ರತಿಯೊಬ್ಬನನ್ನೂ ಕಾಡುತ್ತಿದೆ.

ಅದನ್ನು ಉಲ್ಲಂಘಿಸಿ ಬಂದವರು ಎಷ್ಟು ಜನ? ಆ ಧೈರ್ಯ ಯಾರಿಗಿದೆ? ಮಹಾಕವಿ ರವೀಂದ್ರ ನಾಥ ಠಾಕೂರರು ಈ ಸಮಸ್ಯೆಯನ್ನು ಹೇಗೆ ಬಗೆಹರಿಸಿದರೆಂಬುದು ಬಹಳ ಸ್ವಾರಸ್ಯವಾಗಿದೆ. ತಮ್ಮ ಜೀವನದ ಕೊನೆಗಾಲದಲ್ಲಿ ಅಂದರೆ ೧೯೩೫ರಲ್ಲಿ ಹೇಮಂತಬಾಲಾದೇವಿಗೆ ಬರೆದ ಪತ್ರದಲ್ಲಿ ಅವರು, "...ಬಂಗಾಲಿಯಾಗಿ ನನ್ನ ಆಯುಷ್ಯ ಮುಗಿಯಬಹುದಿದೆ. ಪ್ಲಸ್ ಈ ದೇಸರ ಬರಿಸುವಷ್ಟು ದೀರ್ಘ ಆಯುಷ್ಯಾವಧಿಯಲ್ಲಿ ನನ್ನಿಂದ ಹೊರಹೊಮ್ಮುವ ಪ್ರಾರ್ಥನೆಯೆಂದರೆ ಪುನರ್ಜನ್ಮವೆಂಬುದು ಇದ್ದುದೇ ಆದರೆ ನಾನು ಮತ್ತೆ ಬಂಗಾಲದಲ್ಲಿ ಹುಟ್ಟದಿರಲಿ ಎಂಬುದು. ಇಲ್ಲಿ, ಈ ಪುಣ್ಯಭೂಮಿಯಲ್ಲಿ, ಪುಣ್ಯವಂತರೇ ಜನಿಸಲಿ. ನನ್ನಂಥ ಜಾತಿಪಾಪಿಗೆ ಮನುಷ್ಯ ಮತ್ತೆ ಹುಟ್ಟುವವಾದರೆ ಶಾಸ್ತ್ರಗಳ ಕಟ್ಟುಪಾಡು ಗಳ ಬಂಧನದಲ್ಲೇ ವರ್ತಿಸದೇಇರುವಂಥ ದೇಶ ಎಂದು ಹೇಳುವಂತಾಗಬೇಕು; ಆಗ ಸಾಧ್ಯವೆ? ಇದೇ ಸಮಸ್ಯೆ ದೇವರಲ್ಲಿ ಎಂದು ಸ್ವೇಚ್ಛಾಪ್ರವೃತ್ತಿಯನ್ನು ಪ್ರಚೋದಿಸುತ್ತಿರುವ ಪ್ರತಿಪಕ್ಷವನ್ನೂ ಕಾಡುತ್ತಿದೆ. ಯಾಕೆಂದರೆ ದೇವರಿಲ್ಲ, ಪಾಪ ಪುಣ್ಯಗಳಿಲ್ಲ, ಧರ್ಮ ಜಾತಿಗಳಿಲ್ಲ ಎಂದಾಕ್ಷಣ ಕುಣಿದೆ ಬಿಚ್ಚಿದ ಹೋರಿಯಂತೆ ಜಿಗಿವ ಜನರೇ ಹೆಚ್ಚು. ಅವರಿಂದ ಸಮಾಜದಲ್ಲಿ ಏನೆಲ್ಲ ಅನಾಹುತಗಳಾಗಿವೆ ಎಂಬುದನ್ನು ವಿವರಿಸುವುದು ಅನವಶ್ಯಕ.

ಆದ್ದರಿಂದ ಈ ಎರಡು ಗುಂಪುಗಳಿಂದ ಹೊರಗೆ ಬರುವುದು ಸಾಧ್ಯವಿದೆಯೆ ಎಂದು ಮೊದಲು ವಿಚಾರಿಸಬೇಕಾಗಿದೆ. ಆಮೇಲೆ ಮುಂದೇನು? ಎಂಬುದರ ವಿಚಾರ. ಎಲ್ಲಿಯವರೆಗೆ ಖಂಡನೆಯ ಕುರಿತು ವಿಚಾರಮಾಡುತ್ತೇವೆಯೋ ಅಲ್ಲಿಂದ ವರೆಗೆ ಮಂಡನೆಯ ಕುರಿತು ಆಸ್ಥವ ಕೊಡು ತ್ತೇವೆಂಬುದನ್ನು ನಾವು ಮರೆಯಬಾರದು.

ಯಾಕೆ ಈ ದೇವರು ?

ದಲ್ಲಲ್ಲ. ತನ್ನ ವಿವೇಕವನ್ನು ಸ್ವಾಯತ್ತವಾದ ಮಾರ್ಗದಲ್ಲಿ ರೂಪಿಸಿಕೊಂಡು ಬಾಳಬಹುದಾದಂಥ ದೇಶದಲ್ಲಿ ಜನಿಸಲಿ," ಎಂದು.

ಇದೇ ಸರಿಯಾದ ದಾರಿಯೆಂದು ಇದನ್ನು ನಾನು ಉದ್ಘರಿಸಲಿಲ್ಲ. ಆದರೆ ಒಬ್ಬ ಮಹಾ ಪ್ರಜ್ಞೆಯ ಮನುಷ್ಯನನ್ನೂ ಈ ಸಾಂಪ್ರದಾಯಿಕ ದಾಸ್ಯ ಮನೋವೃತ್ತಿ ಹೇಗೆ ಕಾಡಿತು ಎಂಬುದನ್ನು ತಿಳಿಸುವೆನೆಂತಾಗಿ ಹೇಳಿದೆ. ಆದರೆ ಇದು ಪ್ರತಿಯೊಬ್ಬನೂ ತಲೆ ಕೆಡಿಸಿಕೊಳ್ಳಬೇಕಾದ ಸಮಸ್ಯೆ ಇದು. ಹೊರಬರುವುದು ಎಂದರೆ ಒಂದು ಮತದಿಂದ ಹೊರಬರುವುದು ಇನ್ನೊಬ್ಬನ ಮತದಲ್ಲಿಯೋ, ಪ್ರಭಾವದಲ್ಲಿಯೋ ಬೀಳುವುದು ಎಂದಲ್ಲ. ಅಥವಾ ರವೀಂದ್ರರಂತೆ ಓದಿ ಹೋಗುವುದೂ ಅಲ್ಲ. ಈ ಮತಗಳೆ, ಅಭಿಪ್ರಾಯಗಳ ಲೋಕದಿಂದಲೇ ಹೊರಬರಬೇಕು. ನನ್ನದು ದೊಡ್ಡ ಮತ ಎಂದರೆ 'ಪ್ಲಸ್ ಮತ' ಆದ್ದರಿಂದ ಈ ಖಂಡನೆ-ಮಂಡನೆಗಳ ಗುಂಪಿನಿಂದಲೇ ಹೊರಬರುವುದಾಗಬೇಕು.

ಸ್ವಾತಂತ್ರ್ಯಾನಂತರ ಭಾರತ ದೇಶವು ಜಾತ್ಯತೀತ ರಾಷ್ಟ್ರವೆಂದು ಹೇಳಿಕೊಂಡಿತು. ಆದರೆ ಎಲ್ಲಿ? ಕೇವಲ ಸಂವಿಧಾನದಲ್ಲಿ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಸಂವಿಧಾನದಲ್ಲಿ ಕೂಡ ನಾವು ಸಂಪೂರ್ಣ ಜಾತ್ಯತೀತವಾಗಿಲ್ಲವೆಂದರೆ ಆಶ್ಚರ್ಯವಾದೀತು. ಯಾಕೆಂದರೆ ನಮ್ಮ ಸಂವಿಧಾನದ ಪದವಿನ್ಯಾಸವು ನಿಯಮ ನಮ್ಮ ದೇಶದ ಜಾತ್ಯತೀತತೆಯನ್ನು ಸಾರುತ್ತಿದೆಯಾದರೂ ಅದರ ಜೊತೆಗೆಯೇ ಉಪನಿಯಮವೊಂದು ಕೆಲ ಜಾತಿಯವರನ್ನು ಮುಂದೆ ತರಲು ಈ ನಿಯಮ ಅಡ್ಡಿಯಾಗಬಾರದು ಎಂದು ಹೇಳುತ್ತದೆ. ಅಂದರೆ ನಮ್ಮ ಸಂವಿಧಾನವನ್ನು ರೂಪಿಸುವಾಗಲೇ ನಾವು ಸಂಪೂರ್ಣ ಜಾತ್ಯತೀತರಾಗುವುದು ಸಾಧ್ಯವಿಲ್ಲ ಎಂಬುದು ನಮ-

ನೆಲ್ಲ ಸಂಶಯವಿತ್ತೆಂದು ಕಾಣುತ್ತದೆ. ಎಲ್ಲಿಯವರೆಗೆ ಸರಕಾರೀ ನೌಕರರ ಸರ್ವೀಸ್ ಪುಸ್ತಕಗಳಲ್ಲಿ ಜಾತಿಯ ಕಲಮು ಅಳಿಸಿ ಹೋಗುವುದಿಲ್ಲವೋ ಅಲ್ಲಿಯವರೆಗೂ ನಾವು ಜಾತ್ಯತೀತರಾಗುವುವಾದರೂ ಹೇಗೆ? ನಿಯಮ-ಉಪನಿಯಮಗಳ ಹಿಂದಿದ್ದ ಭಾವನೆಯೇ ವೇರೆಯಾಗಿತ್ತು. ಆದರೆ ಅವುಗಳ ಉಪಯೋಗವೇ ವೇರೆಯಾಗಿದೆ. ವಾಸ್ತವದಲ್ಲಿ "ಜಾತ್ಯತೀತವಾದ ಭಾರತದೇಶವು, ಆರ್ಥಿಕವಾಗಿ-ಶೈಕ್ಷಣಿಕವಾಗಿ ಹಿಂದುಳಿದವರನ್ನು ಮುಂದೆ ತರಲು ಕಟಿಬದ್ಧವಾಗಿದೆ" ಎಂಬುದಾಗಿತ್ತು.

ಕ್ತರಿಪ ನಮ್ಮ ಕೋಶಗಳಲ್ಲಿ ಬರುವ ದೇವರು, ಧರ್ಮ, ಜಾತಿ ಶಬ್ದಗಳನ್ನು ಹೊಪೆದು ಪಾಪ ಪೊರತು ನಮಗೆ ಮುಕ್ತ ಇಲ್ಲ. ನಮ್ಮ ಬೌದ್ಧಿಕರು, ಆಧಿಕಾರಿಗಳು, ಆಳುವ ಪಕ್ಷ ತಪ್ಪಿ ಕೂಡ ಈ ದೇವರು, ಧರ್ಮ, ಜಾತಿಗಳ ವಿಷಯನ್ನು ಎತ್ತದಿರಲಿ. ಆಗ ತುಸು ಬದಲಾಣೆ ಕಂಡೀತು. ಕೇವಲ ಅವುಗಳನ್ನು ಮರೆತು ಬಿಟ್ಟರೆ ಸಾಲದು. ಮರೆತುಬಿಡುವುದೆಂದರೆ, ಮರೆತು ಬಿಡುವುದು. ಅವುಗಳ ಚರ್ಚೆಯಾಗಲೀ, ಅದರಿಂದಾಗುವ ಲಾಭ ಪಾನಿಗಳಾಗಲೀ, ಆ ಬಗ್ಗೆ ವ್ಯರ್ಥ ಪ್ರಮವಾಗಲೀ ಏನೊಂದೂ ಬೇಡ. ಆ ಬಗ್ಗೆ ಅವುಗಳ ಪರ ಅಥವ ವಿರೋಧೀ ಕಾನೂನುಗಳೂ ಬೇಡ. ಮರೆತುಬಿಡುವುದೆಂದರೆ ಸಂಪೂರ್ಣ ಮರೆತುಬಿಡುವುದು. ಅವುಗಳ ಅಸ್ತಿತ್ವವನ್ನೇ ಇಲ್ಲದಾಗಿಸುವುದು. ನಮ್ಮ ದೈನಂದಿನ ಬದುಕಿನಲ್ಲಂತೂ ಅವುಗಳ ಅವಶ್ಯಕತೆ ಇಲ್ಲವೆಂದು ಈ ಮೊದಲೇ ನೋಡಿದ್ದಾಗಿದೆ. ನೋಡುವಾ, ತುಸು ದಿನ ಇವುಗಳನ್ನು ಮರೆಯಲು ನಮಗೆ ಸಾಧ್ಯವಾದೀತೆ? ಬುದ್ಧಿವಂತರು ಈ ಕುರಿತು ಯೋಚಿಸುತ್ತಾರೆಯೆ? ಅವರ ಲೇಖನಿಯಲ್ಲಿ, ಅವರ ಭಾಷಣಗಳಲ್ಲಿ ತುಸು ದಿನ ಈ ದೇವರು, ಧರ್ಮ, ಜಾತಿಗಳನ್ನು ಬಹಿಷ್ಕರಿಸುತ್ತಾರೆಯೆ? ಅವರ ಕಾದಂಬರಿಗಳಲ್ಲಿ ಜಾತ್ಯತೀತ ಪಾತ್ರಗಳ ಸೃಷ್ಟಿ ಸಾಧ್ಯವಿದೆಯೆ? ದೇವರು, ಧರ್ಮದ ಪ್ರಸ್ತಾಪ ಬರದಿರುವುದು ಸಾಧ್ಯವಿದೆಯೆ?



ಸಾವಿರ ಬಾರಿ ಹೇಳಬಹುದಾದ ಮಾತುಗಳನ್ನೇ ಮುದ್ರಿಸಲು ಯೋಗ್ಯವಾಗಿರುತ್ತವೆ.

**

ಅತಿಯಾದ ಸ್ವಭಾಷಾಭಿಮಾನವೂ ಜ್ಞಾನಗಂಗೆಗೆ ಅಡ್ಡಗೋಡೆಗಳನ್ನು ನಿರ್ಮಿಸಿ ಬಾವಿಗಳನ್ನು ನಿರ್ಮಿಸುತ್ತದೆ.

**

ಮುಖಪುಟಗಳನ್ನೇ ಫೋನು ಹಾಗೂ ಪತ್ರಗಳ ಮೂಲಕ ಪ್ರತಾಪನನ್ನು ಕೊಚ್ಚಿಕೊಳ್ಳುತ್ತಾರೆ.

**

ದೈತಾದ್ವೈತಗಳು ಇಸ್ಪೀಟಿನ ಎಲೆಗಳಂತಿವೆ. ಅದ್ವೈತದೃಷ್ಟಿಯಿಂದ ಈ ಸೃಷ್ಟಿ ಎಲ್ಲವೂ ಬ್ರಹ್ಮಮಯವಾಗಿ ಕಾಣುತ್ತದೆ. ಆದೇ, ದ್ವೈತದೃಷ್ಟಿಯಿಂದ ಪೋಟಿವೆ ಜಗತ್ತು ತಾರತಮ್ಯಮಯವಾಗಿ ಕಾಣಿಸುತ್ತದೆ.

ಸಂಗ್ರಹ : ರಮಾದೇವಿ ಮೂರ್ತಿ